Mr. SPEAKER.—Every days authorisation is not correct. Please convey to Sri M. P. Patil, if he wants any arrangements to be made in view of his invalidity, I will make arrangements. I will arrange for his sitting in House stretching his legs. But, this is not nice, You can put the question.

AGRICULTURAL PRODUCE REGULATED MARKETS IN THE STATE

*Q.—855. Sri S. D. KOTHAWALE (Chikodi) [on behalf of Sri M. P. PATIL (Hukeri)].—

Will the Government be pleased to state :—

(*a*) the total number of Agricultural Produce Regulated Markets in the state ;

(*b*) the number of Markets that have been provided with rest houses and cattle sheds for the convenience of the farmers who bring their agricultural produce to the market yard for sale ;

(*c*) the reasons for not providing these amenities in other markets;

(*d*) whether they will take steps to see that these markets are provided with these amenities as early as possible ?

*A.—Sri MALI MARIAPPA (Minister for Co-operation).—

(*a*) 72.

(*b*) 12.

(*c*) For want of proper and suitable sites for location of the Market Yard.

(*d*) Yes.

Sri G. VENKATAI GOWDA.—You have said that only in 12 places rest houses and cattle sheds are provided. May I know the reason why Government brought in 72 Regulated Markets without providing these amenities ?

†Sri MALI MARIYAPPA.—The existing market is being made use of. The question of acquisition of land is also being taken up.

Sri G. VENKATAI GOWDA.—What are the factors that weigh with Government to give these regulated markets ?

Sri MALI MARIAPPA.—Generally, the quantum of trade that is going on and the other practices that are prevailing there and the necessity to prevent any mal-practice there. These are the factors.

Sri G. B. SHANKAR RAO.—May I know in how many cases of the regulated markets the question of acquisition proceedings are pendings and since how long ?

Sri MALI MARIYAPPA.—The exact number cannot be furnished, out of 72, in 60 cases steps are being taken for acquisition of land and it is at various stages.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ತಿಪಟೂರು ಮಾರ್ಕೆಟ್ ಯಾರ್ಡಿನಲ್ಲಿ ಎಲ್ಲ ಅನುಕೂಲ ಕಲ್ಪಿಸಿ ಕೊಟ್ಟಿದ್ದೀರಾ ?

ಶ್ರೀ ಮಾಲಿ ಮರಿಯಪ್ಪ.—ಅದನ್ನು ಕಲ್ಪಿಸಿ ಕೊಡುತ್ತೇವೆ. ಕಟ್ಟಡ ಕಟ್ಟುವುದಕ್ಕೆ ಕೊಂಚ ಕಾಲ ಹಿಡಿಯುತ್ತದೆ.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ತಿಪಟೂರು ಮಾರ್ಕೆಟ್ ಆಗಿ 20 ವರ್ಷವಾಯಿತು. ಈ ಎಲ್ಲ ಅನುಕೂಲ ಕಲ್ಪಿಸಿ ಕೊಡಲು ಇನ್ನೂ ಎಷ್ಟು ವರ್ಷ ಬೇಕು ?

ಶ್ರೀ ಮಾಲಿ ಮರಿಯಪ್ಪ.—ತಿಪಟೂರು ಮಾರ್ಕೆಟ್ಟಿನ ವಿಚಾರ ಎಲ್ಲವೂ ಮಾನ್ಯ ಸದಸ್ಯರಿಗೆ ಗೊತ್ತಿದೆ. ಎಲ್ಲ ಅನುಕೂಲ ಕಲ್ಪಿಸಿಕೊಡಲಾಗುತ್ತಿದೆ. ಅವರೆ ಕೆಲವು ವ್ಯಾಪಾರಸ್ಥರು ಮಾರ್ಕೆಟ್ ಯಾರ್ಡಿಗೆ ಶಿಫ್ಟ್ ಮಾಡಲು ಸಾಕಷ್ಟು ಕಾಲಾವಧಿ ತೆಗೆದುಕೊಂಡರು. ಈಗ ಕಟ್ಟಡ ಕಟ್ಟಿದೆ. ಇನ್ನು ಮುಂದಿನ ಕಾರ್ಯಕ್ರಮ ತೆಗೆದು ಕೊಳ್ಳ ತ್ತಿದ್ದೇವೆ.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಜನಗಳಿಗಾಗಿ ಬೇಕಾಗುವ ಅನುಕೂಲತೆ ಜನರಿಗೆ ಸಾಲಭ್ಯ ಮುಂತಾದ ಎಲ್ಲ ಅನುಕೂಲತೆಗಳನ್ನು ಒದಗಿಸುತ್ತೀರಾ ?

ಶ್ರೀ ಮಾಲಿ ಮರಿಯಪ್ಪ.—ಎಲ್ಲ ಅನುಕೂಲತೆ ಒದಗಿಸಲಾಗುವುದು.

Sri F. H. MOHSIN.—Is it the intention of the Government to establish Agricultural produce Regulated Markets in each taluk of the State ?

Sri MALI MARIYAPPA.—Yes, that is the policy.

Sri F. H. MOHSIN.—Is, there any phased programme in this regard before the Government ?

Sri MALI MARIAYPPA.—Yes.

Sri F. H. MOHSIN.—In how many years, they want to establish such markets in each taluk of the State ?

Sri MALI MARIYAPPA.—It is not possible to give a time-limit for that. But, I think, in the Third and the Fourth Five-Year Plans period this will be done.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ರೆಗ್ಯೂಲೇಟೆಡ್ ಮಾರ್ಕೆಟ್ ಪ್ರಾರಂಭ ಮಾಡುವುದಕ್ಕೆ ಮುಂಚೆ ಆಗತ್ಯವಿರುವ ಸ್ಥಳದ ಬಗ್ಗೆ ಪೂರ್ಣ ಸಿದ್ಧತೆ ಮಾಡಿ ಕೊಳ್ಳದೆ ರೈತರಿಗೆ ಎಲ್ಲ ಅನುಕೂಲತೆ ಒದಗಿಸುತ್ತೇವೆ ಎಂದರೆ ಅರ್ಥವೇ ಆಗುವುದಿಲ್ಲವಲ್ಲಾ ?

ಶ್ರೀ ಮಾಲಿ ಮರಿಯಪ್ಪ.—ರೆಗ್ಯೂಲೇಟೆಡ್ ಮಾರ್ಕೆಟ್ ಪ್ರಾರಂಭ ಮಾಡುವುದಕ್ಕೆ ಜಮೀನನ್ನು ಕೆಗದುಕೊಳ್ಳತಕ್ಕಂಥಾದ್ದು ಇಲ್ಲ ಎಂದು ಎಲ್ಲೂ ಮಾಡಿಲ್ಲ. ಆದರೆ ಇರತಕ್ಕಂಥ ಮಾರ್ಕೆಟ್ ಸ್ಥಳದಲ್ಲಿಯೇ ರಗ್ಯೂಲೇಟೆಡ್ ಮಾರ್ಕೆಟ್ಟಿಗಾಗಿ ಜಮೀನನ್ನು ಉಪಯೋಗಿಸಬೇಕೆಂದು ಕಾನೂನು ಪ್ರಕಾರ ಜಾರಿ ಮಾಡಿಕೊಂಡು ಜಮೀನನ್ನು ಆಕ್ವೈರ್ ಮಾಡಲಾಗುತ್ತಿದೆ.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ರೆಗ್ಯುಲೇಟೆಡ್ ಮಾರ್ಕೆಟ್ ಬಂದಮೇಲೆ ರೈತರಿಗೆ ಆಗಿರುವ ಅನುಕೂಲವೇನು ? ಅನುಕೂಲವಾಗದೆ ಇದ್ದರೆ, ಏಕೆ ಸ್ಥಾಪನೆ ಮಾಡಬೇಕು, ಈಗಿರುವ ಸ್ಥಿತಿಯಲ್ಲಿಯೇ ರಗ್ಯುಲೇಟೆಡ್ ಮಾರ್ಕೆಟ್‌ಗಳಿದ್ದರೆ ಅದರಿಂದ ಏನು ಪ್ರಯೋಜನ ?

ಶ್ರೀ ಮಾಲಿ ಮರಿಯಪ್ಪ.—ಜಮೀನನ್ನು ಆಕ್ವೈರ್ ಮಾಡಿಕೊಂಡು ಕಾರ್ಯಗತ ಮಾಡಬೇಕು. ಕೆಲವು ಸಂದರ್ಭಗಳಲ್ಲಿ ಎರಡು ವರ್ಷದವರೆಗೂ ಆಕ್ಷೇಪಣೆ ಕ್ರಮ ಹಿಡಿಯುತ್ತದೆ. ಕೆಲವು ಕಾನೂನುಗಳನ್ನು ಅನುಸರಿಸಿದರೆ ರೈತರಿಗೆ ನಿಜವಾಗಿಯೂ ಪರಿಹಾರ ಸಿಕ್ಕುತ್ತದೆಂದು ತಿಳಿಯಬೇಕು.

Sri G. B. SHANKAR RAO.—The Hon'ble Minister was pleased to reply to a previous supplementary by Sri Mohsin that establishing regulated markets in all the taluks of the State is to be achieved by a phased programme. May I know how many regulated markets are going to be established during the current year ?

Sri MALI MARIYAPPA.—It is not possible to exactly fix the number for every year. But generally wherever there are facilities and wherever public opinion is also ripe, the Department will go on organising regulated markets.

Sri G. B. SHANKAR RAO.—May I know in how many cases you have felt that the facilities are there and public opinion is also is ripe for establishing regulated markets in the taluks ?

Sri MALI MARIAPPA.—I have already answered. There are 12 markets where facilities are available.

ಶ್ರೀ ಕೆ. ಪಿ. ಗದಗ್.—ರೈತರ ವಾಸದ ಸಲುವಾಗಿ rest houses ಮತ್ತು cattle sheds ಕಟ್ಟಿಸುವುದು ಯಾವ ಉತ್ಪನ್ನದಿಂದ ಖರ್ಚು ಹಾಕಿ ಕಟ್ಟಿಸುತ್ತಾರೆ ?

ಶ್ರೀ ಮಾಲಿ ಮರಿಯಪ್ಪ.—ಸಾಮಾನ್ಯವಾಗಿ ಮಾರ್ಕೆಟ್ ಕಮಿಟಿಗೆ ಬರುವ ಉತ್ಪತ್ತಿಯಿಂದರೇ ಕಟ್ಟಿಸಬೇಕು ಎಂದು ಇವೆ. ಆದರೆ ಮೊದಲು ಸರ್ಕಾರದವರು ಸಾಲ ಕೊಡುತ್ತಾರೆ.

Sri B. S. SHANKARAPPA.—Is it not a fact that the Government is forcing some regulated markets to the yards without creating facilities to the agriculturists there, Sir ?

ಶ್ರೀ ಮಾಲಿ ಮರಿಯಪ್ಪ.—ಅನುಕೂಲತೆಗಳನ್ನು ಕಲ್ಪಿಸಿದ ಮೇರೆ ಹೋಗುತ್ತೇವೆನ್ನುವದಕ್ಕಿಂತಲೂ ಸಾಧಾರಣವಾಗಿ ರೆಗ್ಯುಲೇಟೆಡ್ ಮಾರ್ಕೆಟ್ ನಡೆಸುವುದಕ್ಕೆ ಅಗತ್ಯವಾದ ಸಾಕಾರ್ಯ ವಿದ್ದಾಗ ಅಲ್ಲಿಗೆ ಹೋಗಲೇಬೇಕು.

ಶ್ರೀ ಬಿ. ಎಸ್. ಶಂಕರಪ್ಪ.—ವಿಮ್ಯುಚ್ಚಕ್ಕಿ, ಮಾರ್ಕೆಟ್ಟಿಗೆ ಹೋಗತಕ್ಕ ರಸ್ತೆ, ದನಗಳಿಗೆ ಕುಡಿಯಲು ನೀರು, ಸೆರಸು ಇಲ್ಲದೆ ಇದ್ದರೂ ಅಲ್ಲಿಗೆ ಹೋಗಿ ಎಂದರೆ ಹೇಗೆ ಹೋಗುತ್ತಾರೆ ? ಅವರಿಗೆ ಏನು ಸಾಕಾರ್ಯ ಸಿಕ್ಕುತ್ತದೆ ?

ಶ್ರೀ ಮಾಲಿ ಮರಿಯಪ್ಪ.—ವಿಮ್ಯುಚ್ಚಕ್ಕಿ ಅಷ್ಟು ಅಗತ್ಯವಾಗಿ ಬೇಕಾಗಿಲ್ಲ. ವಿದ್ಯುಚ್ಚಕ್ತಿಯನ್ನು ಒಂದೆರಡು ತಿಂಗಳಲ್ಲಿ ಹಾಕಿಸಲು ಸಾಧ್ಯವಾಗುತ್ತದೆ. ಮಾರ್ಕೆಟ್ಟಿಗೋಸ್ಕರ ಲಕ್ಷಾಂತರ ರೂಪಾಯಿ ಖರ್ಚು ಮಾಡಿ, ಅಭಿವೃದ್ಧಿ ಮಾಡಿರುವಾಗ ಒಂದೇ ಕಾರಣವನ್ನಿಟ್ಟುಕೊಂಡು ಹೋಗುವುದಿಲ್ಲವೆನ್ನುವುದು ಅಷ್ಟು ಸರಿಯಾದುದಲ್ಲ.

Sri B. G. KHOT.—For what main commodities these regulated markets are started ? What are the main commodities ?

ಶ್ರೀ ಮಾಲಿ ಮರಿಯಪ್ಪ.—ವ್ಯವಸಾಯದ ಉತ್ಪನ್ನಗಳಿಗಾಗಿ ಇವನ್ನು ಮಾಡಿದೆ. ಆದರೆ ಕೆಲವು ಮಾರ್ಕೆಟ್ ಕಮಿಟಿಗಳಲ್ಲಿ ಕೆಲವು ವ್ಯವಸಾಯದ ಉತ್ಪನ್ನಗಳಿಗೆ ಮಾತ್ರ regulate ಮಾಡುತ್ತಿದ್ದಾರೆ.

Sri K. S. SURYANARAYANA RAO.—Has it come to the notice of the Government that in places where regulated markets are situated, auctions of commodities received by private premises and commission is also paid to them ?

Sri MALI MARIYAPPA.—No. If any such instances are brought to the notice of the Government, action will be taken.

ಶ್ರೀ ಪಿ. ಜಿ. ಸಿದ್ದಾಂತಿ.—ಒಂದೊಂದು ಮಾರ್ಕೆಟ್ಟಿನಲ್ಲೂ ಕೆಲವು ಸಬ್ ಮಾರ್ಕೆಟ್‌ಗಳಿರುತ್ತವೆ. ಅವು ಎಷ್ಟಿವೆ ಎಂದು ಹೇಳುತ್ತೀರಾ ?

ಶ್ರೀ ಮಾಲಿ ಮರಿಯಪ್ಪ.—ಆ ವಿವರಗಳು ಈಗ ನನ್ನಲಲ್ಲಿ, 12 ಮಾರ್ಕೆಟ್‌ಗಳಿಗೆ ಮಾತ್ರ ಅನುಕೂಲಗಳನ್ನೊದಗಿಸಿದ್ದೇವೆ.

ಶ್ರೀ ಎಚ್. ಜಿ. ನರಸಿಂಹೆಗೌಡ.—ಬೆಂಗಳೂರು ನಗರದಲ್ಲಿ ಮಾರ್ಕೆಟ್ ಯಾರ್ಡ್ ಎಲ್ಲಿ ಮಾಡಿದ್ದಿರಿ ?

ಶ್ರೀ ಮಾಲಿ ಮರಿಯಪ್ಪ.—ಇನ್ನೂ ಸ್ಥಳ ನಿರ್ಧರ ಮಾಡಿಲ್ಲ. Land Acquire ಮಾಡುವುದಕ್ಕೆ ಕ್ರಮ ತೆಗೆದುಕೊಂಡಿದ್ದೇವೆ.

ಶ್ರೀ ಎಚ್. ಜಿ. ನರಸಿಂಹೇಗೌಡ.—ಬೆಂಗಳೂರು ನಗರದಲ್ಲಿ ಮಾರ್ಕೆಟ್ ಯಾರ್ಡ್ ಇಲ್ಲದೇ ಇರುವುದರಿಂದ ಸುತ್ತಮುತ್ತಲಿನಿಂದ ಬರುವ ರೈತರಿಗೆ ಬಹಳ ತೊಂದರೆಯಾಗಿದೆ ಮತ್ತು ಅನ್ಯಾಯ ನಡೆಯುತ್ತಿದೆಯೆಂದು ಸರ್ಕಾರಕ್ಕೆ ಗೊತ್ತಿದೆಯೇ ?

ಶ್ರೀ ಮಾಲಿ ಮರಿಯಪ್ಪ.—ಕೊಂಚಮಟ್ಟಿಗೆ ತೊಂದರೆಯಿದೆ ಎನ್ನುವುದು ನಿಜ. ಅನ್ಯಾಯವಾಗುತ್ತಿದೆ ಎಂಬುದು ಗೊತ್ತಿಲ್ಲ.

ಶ್ರೀ ಕೆ. ವಿ. ಬೈರೇಗೌಡ.—ಮಾರ್ಕೆಟ್ ಯಾರ್ಡಿಗಾಗಿ ಟ್ರಸ್ಟ್ ಬೋರ್ಡಿನವರನ್ನೂ ಏನಾದರೂ ಸ್ಥಳಕ್ಕಾಗಿ ಕೇಳಿದ್ದೀರಾ ?

ಶ್ರೀ ಮಾಲಿ ಮರಿಯಪ್ಪ.—ಎರಡು ಜಾಗ ಗೊತ್ತು ಮಾಡಿದೆ. ಬಾಬಾ ಹುಡ್ಸ್ ಎನ್ನುವ ಕಡೆ ಮಾತುಬೇಕೆಂದು ಮೊವರ್ ಫ್ರೈಸರ್ ಇತ್ತು. ಅದರೆ ಅಲ್ಲಿ ಜಾಗ ಸಾಕಾಗುವುದಿಲ್ಲವೆಂದು ಯಶವಂತಪುರದ ಹತ್ತಿರ 40 ಎಕರೆ ತೆಗೆದುಕೊಳ್ಳಲು ಪತ್ರ ವ್ಯವಹಾರ ನಡೆಯುತ್ತಿದೆ.

Sri H. V. KOUJALGI.—Is it the policy of the Government to provide rest houses and sub-market yards also ?

Sri MALI MARIYAPPA.—As far as possible.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—72 ಮಾರ್ಕೆಟ್‌ಗಳ ಪೈಕಿ 12 ಕಡೆಗಳಲ್ಲಿ ಎಲ್ಲ ಅನುಕೂಲತೆಗಳೂ ಇಲ್ಲವೆಂದು ಹೇಳಿದ್ದೀರಿ. ಉಳಿದುದರ ಪೈಕಿ ಎಲ್ಲೆಲ್ಲಿ ಸೌಲಭ್ಯಗಳು ಸಿಕ್ಕಿವೆ, ಎಲ್ಲೆಲ್ಲಿ ಸಿಕ್ಕಲ್ಲ, ಸೈಟ್ ಸಿಕ್ಕಿದ್ದರೂ ಎಲ್ಲೆಲ್ಲಿ suitable arrangements ಮಾಡಿಲ್ಲ ?

ಶ್ರೀ ಮಾಲಿ ಮರಿಯಪ್ಪ.—Suitable sites ಸಿಕ್ಕಿರುವ ಕಡೆಗಳೆಲ್ಲೆಲ್ಲ suitable arrangements ಮಾಡಲಾಗಿದೆ. ಎಲ್ಲೆಲ್ಲಿ ಸೈಟ್ ಸಿಕ್ಕಿಲ್ಲವೋ ಅಲ್ಲಿ ಏನೂ ಮಾಡಿಲ್ಲ.

Sri C. J. MUCKANNAPPA.—Is it not a fact that in the district from which the Hon'ble Minister hails there are markets which are already in possession of market yards which have not provided facilities to agriculturists who are bringing their produce ?

ಶ್ರೀ ಮಾಲಿ ಮರಿಯಪ್ಪ.—Particular instances ಯಾವುದಾದರೂ ಹೇಳಿದರೆ ಅದರ ವಿಚಾರ ತಿಳಿಸಬಹುದು.

Sri C. K. RAJAIAH SHETTY.—The Minister was pleased to State that out of 72 markets, in some places only regulated market rules are in force, and market yards are not provided. Out of 72, may I know in how many cases regulated markets are separately established and in how many cases only the rules and Act are in force ?

Sri MALI MARIYAPPA.—That is the answer that has been furnished. The question is in how many market yards, facilities for cattle sheds and rest houses and also roads are provided : the answer is 12.

Sri C. K. RAJAIAH SHETTY.—My question is, you were pleased to say that in certain cases like Bangalore, only the regulated market Act is in force. May I know in how many cases out of this 72, only the Act is in force and in how many cases separate regulated markets are established ?

Sri MALI MARIYAPPA.—Out of 72, in 60 Market Act is in force.

ಶ್ರೀ ಕೆ. ಪಿ. ಗವಗ್.—ರೈತರ ಸಲುವಾಗಿ ಈಗ ಕಟ್ಟಿಸಿರುವ 12 ರೆಸ್ಟ್ ಹೌಸನ್‌ರ್ಲ್ಲಿ ಒಟ್ಟು ಇತರರು ವಾಸಿಸುತ್ತಿದ್ದಾರೆ, ಮತ್ತು ಅದೇ ಪ್ರಕಾರ ದನಗಳ ಸಲುವಾಗಿ ಕಟ್ಟಿರು ವುದರಲ್ಲಿ ದನಗಳನ್ನು ಕಟ್ಟಿದೆ ಇಂಥ ಕ್ರಮ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಮಾಲಿ ಮರಿಯಪ್ಪ.—ಅಂಥಾದ್ದು ಇನ್ನೂ ಸರ್ಕಾರದ ಗಮನಕ್ಕೆ ಬಂದಿಲ್ಲ. ಮಾನ್ಯ ಸದಸ್ಯರ ಗಮನಕ್ಕೆ ಬಂದರೆ, ಅಂಥ ವಿಚಾರಗಳಿಗೆ ಮಾರ್ಕೆಟ್ ಕಮಿಟಿಯವರು effective action ತೆಗೆದುಕೊಳ್ಳಬೇಕು. ಒಂದುವೇಳೆ ಅವರು ತೆಗೆದ ಕೊಳ್ಳದೆ ಹೋದರೆ ಸರ್ಕಾರದ ಗಮನಕ್ಕೆ ತಂದರೆ effective action ತೆಗೆದುಕೊಳ್ಳುತ್ತೇವೆ.

ಶ್ರೀ ಎಚ್. ಜಿ. ನರಸಿಂಹೇಗೌಡ.—ಮೂರನೆಯ ಯೋಜನೆಯಲ್ಲಿ ಪ್ರತಿ ತಾಲ್ಲೂಕಿನಲ್ಲಿಯೂ ರೆಗ್ಯುಲೇಟೆಡ್ ಮಾರ್ಕೆಟ್ ಪದ್ಧತಿಯನ್ನು ಜಾರಿಗೆ ತರಬೇಕೆಂದು ಯೋಜನೆ ಮಾಡಿದ್ದೀರಾ ?

ಶ್ರೀ ಮಾಲಿ ಮರಿಯಪ್ಪ.—ಅವಶ್ಯವಿರುವಷ್ಟಿಗೂ ಸಂಸ್ಥಾನಾಧ್ಯಂತ ರೆಗ್ಯುಲೇಟೆಡ್ ಮಾರ್ಕೆಟ್ ಸ್ಥಾಪನೆಮಾಡಬೇಕೆನ್ನುವುದೇ ಸರ್ಕಾರದ ನೀತಿ. ಅದನ್ನು ಕ್ರಮ ಕ್ರಮವಾಗಿ ಮುಂದುವರಿಸುತ್ತೇವೆ.

ಶ್ರೀ ಎಚ್. ಜಿ. ನರಸಿಂಹೇಗೌಡ. ಮೂರನೆಯ ಯೋಜನೆ ಮುಗಿಯುವುದರೊಳಗಾಗಿ ಪ್ರತಿ ತಾಲ್ಲೂಕಿನಲ್ಲಿಯೂ ಮಾರ್ಕೆಟ್ ಪದ್ಧತಿಯನ್ನು ಜಾರಿಗೆ ತರಲು ಪ್ರಯತ್ನ ಮಾಡುತ್ತೀರಾ ?

ಶ್ರೀ ಮಾಲಿ ಮರಿಯಪ್ಪ.—ಕಾರಾವಧಿ ಇಷ್ಟೇ ಎಂದು ಹೇಳುವುದಕ್ಕಾಗುವುದಿಲ್ಲ. ಮೂರು ಮತ್ತು ನಾಲ್ಕನೆಯ ಯೋಜನೆಗಳ ಅವಧಿಯೊಳಗೆ ಸಂಸ್ಥಾನದಲ್ಲಿ ಎಲ್ಲ ಭಾಗ ಗಳಲ್ಲಿಯೂ ಆಗುತ್ತದೆಂದು ನೆಚ್ಚಿಕೆ ಇಟ್ಟುಕೊಳ್ಳಬಹುದು.

Sri G. B. SHANKAR RAO.—Are the Government aware that the question of establishing an independent agricultural produce market for each taluk is pending with the Government and whether they are taking a decision soon ?

Sri MALI MARIYAPPA.—May I know if the Hon'ble Member is referring to Hirekerur ?

Sri G. B. SHANKAR RAO.—Yes.

Sri MALI MARIYAPPA.—The matter is pending before Government.

Sri G. B. SHANKAR RAO.—The Government are serious in sanctioning a independent market at that place. May I know whether it is possible to pass orders soon ?

Sri MALI MARIYAPPA.—There are certain initial difficulties; they have to be overcome. Government is seized of the matter.

ಶ್ರೀ ಟಿ. ತಾರೇಗೌಡ.—(ಸಿ) ಭಾಗಕ್ಕೆ ಉತ್ತರವಾಗಿ "ಮಾರ್ಕೆಟ್ ಯಾರ್ಡಿನ ಏರ್ಪಾಡಿಗಾಗಿ ತಕ್ಕ ಹಾಗೂ ಸೂಕ್ತವಾದಂಥ ನಿರ್ದೇಶನಗಳು ದೊರೆಯದಿದ್ದುದೇ ಕಾರಣ" ಎಂದು ತಿಳಿಸಿದ್ದೀರಿ. ಕೆಲವು ಮಾರುಕಟ್ಟೆಗಳಿರುವ ಸ್ಥಳಗಳಲ್ಲಿ ವರ್ತಕರು ಮತ್ತು ಮುನಿಸಿಪಾಲಟಿಯವರ ಸ್ವೆಟುಗಳ ವಿಚಾರದಲ್ಲಿ ಜಾಗ್ರತೆ ಒಂದು ಅಭಿಪ್ರಾಯಕ್ಕೆ ಬಾರದೇ ಇರುವುದೇ ಕಾರಣವಲ್ಲವೇ ?

ಶ್ರೀ ಮಾಲ ಮರಿಯಪ್ಪ.—ಅನೇಕ ಮಾರು ಕಟ್ಟೆಗಳಲ್ಲಿ ಸ್ವೆಟುಗಳ ವಿಚಾರದಲ್ಲಿ ಜಿಜ್ಞಾಸೆಯುಂಟಾಗಿ, ಜಾಗ್ರತೆಯಾಗಿ ಜಮೀನನ್ನು ತೆಗೆದುಕೊಳ್ಳುವುದಕ್ಕೆ ಅವಕಾಶವಿಲ್ಲದೆ ಇರುವ ಕಾರಣಗಳೂ ಇವೆ.

9—00 A.M.

ಶ್ರೀ ಬಿ. ಹೆ. ಖೋತ್.—ಈ ರೆಗ್ಯೂಲೇಟೆಡ್ ಮಾರ್ಕೆಟ್ ವಿಷಯಿಂದ ಚೊಬ್ಯಾಕೋಗೆ ಸ್ವಲ್ಪ ಅನುಕೂಲವಾದೀತೇ ?

ಶ್ರೀ ಮಾಲ ಮರಿಯಪ್ಪ.—ಚೊಬ್ಯಾಕೋದು ಬೇರೆ ಪ್ರಶ್ನೆ ಕೇಳಿದರೆ ಹೇಳುವುದಕ್ಕೆ ಸಾಧ್ಯ.

ಶ್ರೀ ಡಿ. ಎಚ್. ರುದ್ರಪ್ಪ.—ಕಡೂರಿನಲ್ಲಿ ರೆಗ್ಯೂಲೇಟೆಡ್ ಮಾರ್ಕೆಟ್ ಮಾಡಬೇಕೆಂದು ಹೇಳಿ ನಾಲ್ಕು ವರ್ಷವಾಯಿತು, ಜಾಗ ತೆಗೆದುಕೊಂಡಿದ್ದೀರ. ಅಲ್ಲಿ ಇನ್ನೂ ಏಕೆ ಫೆಸಿಲಿಟೀಸ್ ಕೊಟ್ಟಿಲ್ಲ ?

ಶ್ರೀ ಮಾಲ ಮರಿಯಪ್ಪ.—ಫೆಸಿಲಿಟೀಸ್ ಕೊಡತಕ್ಕಂಥಾದ್ದು ಸರ್ಕಾರ ಒಬ್ಬರದೇ ಕರ್ತವ್ಯವಲ್ಲ ರೆಗ್ಯೂಲೇಟೆಡ್ ಮಾರ್ಕೆಟ್ ಕಮಿಟಿಯಾದರೂ ಸ್ವಲ್ಪ ಶ್ರದ್ಧೆ ವಹಿಸುವುದು ಅಗತ್ಯ. ಅವರೂ ಜಾಗ್ರತೆ ತಮ್ಮ ಕೆಲಸ ಮಾಡಬೇಕು.

ಶ್ರೀ ಡಿ. ಎಚ್. ರುದ್ರಪ್ಪ.—ಅಲ್ಲಿಗೆ ಸಾಲ ಕೊಟ್ಟು ಎನ್‌ಕರೇಜ್ ಮಾಡುವುದನ್ನು ಯೋಚಿಸುತ್ತೀರ ?

ಶ್ರೀ ಮಾಲ ಮರಿಯಪ್ಪ.—ಸಾಲ ಕೊಡತಕ್ಕಂಥಾದ್ದು ಫೈನಾನ್ಷಿಯಲ್ ಸಾಂಡ್‌ನೆಸ್ ನೋಡಿ.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ನಂಸ್ಥಾನದಲ್ಲಿ ರೆಗ್ಯೂಲೇಟೆಡ್ ಮಾರ್ಕೆಟ್ಟುಗಳು ಸ್ಥಾಪನೆಯಾದ ಮೇಲೆ ರೈತರಿಗಾಗಲಿ ಅಥವ ವರ್ತಕರಿಗಾಗಲೀ, ಅಲ್ಪ ಸ್ವಲ್ಪವಾದರೂ ತಿಲಾಂಶದಷ್ಟು ನಿಮ್ಮ ಮಾರ್ಕೆಟ್ಟುಗಳಿಂದ ಅನುಕೂಲವಾಗಿದೆಯೆಂದು ಸರ್ಕಾರ ಭಾವಿಸಿದೆಯೇ ?

ಅಧ್ಯಕ್ಷರು.—ಅದು ಅಭಿಪ್ರಾಯದ ಮಾತು.

ಶ್ರೀ ಮಾಲ ಮರಿಯಪ್ಪ. ಏನೂ ಅನುಕೂಲವಾಗಿಲ್ಲ ಎಂಬುದು ಸರ್ಕಾರದ ಗಮನಕ್ಕೆ ಬಂದಿಲ್ಲ ಏನೂ ಅನುಕೂಲವಾಗಿಲ್ಲವೆಂಬುದು ತಮ್ಮ ಅಭಿಪ್ರಾಯ ಸರ್ಕಾರದ ಅಭಿಪ್ರಾಯ ಅನುಕೂಲವಾಗಿದೆ, ಅನುಕೂಲವಾಗುತ್ತದೆ ಎಂದು.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಕಂಪು ಟೀಟ ನೋಡಿದರೆ ಏನಾದರೂ ಮಾಲು ನೋಡಿದ ಹಾಗಾಯಿತೇ ?

ಶ್ರೀ ಮಾಲ ಮರಿಯಪ್ಪ.—ಅಂಥ ವ್ಯತ್ಯಾಸಗಳು ಮಾನ್ಯ ಸದಸ್ಯರ ಗಮನಕ್ಕೆ ಬಂದಿದ್ದರೆ. ಮಾರ್ಕೆಟ್ ಕಮಿಟಿಗೂ ತಿಳಿಸಬೇಕು, ಸೆಕ್ರೆಟರಿಗೂ ತಿಳಿಸಬೇಕು, ಗವರ್ನ್‌ಮೆಂಟಿಗೂ ತಿಳಿಸಬೇಕು.